ದಿನಾಂಕಃ 05.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ..ಎಸ್.ಎ ವಕೀಲರಿಂದ:**

ಈ ದಾವೆಯನ್ನುಸಲ್ಲಿಸಿದ ನಂತರ ಶಾಲೆಗೆ ಗೇಣಿ ಕಟ್ಟಿರುವ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ಆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪರ ನಡುವೆ ಕುಟುಂಬದ ಸ್ವತ್ತುಗಳು ವಿಬಾಗವಾಗಿವೆ ಎಂದರೆ ಸರಿ. ದಾವಾ ಬಿ ಅನುಸೂಚಿ ಜಮೀನನ್ನು ನನ್ನ ಅಜ್ಜನ ತಂದೆ ದಾನ ಕೊಟ್ಟಿದ್ದರು. ಮೇಲೆ ಹೇಳಿದ ವಿಬಾಗದಲ್ಲಿ ದಾವಾ ಬಿ ಅನುಸೂಚಿ ಜಮೀನು ಸೇರಿತ್ತು. ಈ ವಿಚಾರವನ್ನು ವಿಬಾಗ ಪತ್ರದ ಅನುಸೂಚಿಯಲ್ಲಿ ನಮೂದು ಮಾಡಲಾಗಿದೆ. ವಿಬಾಗ ಪತ್ರದಂತೆ ನನ್ನ ತಂದೆಯ ಹೆಸರಿಗೆ ಖಾತಾ ಆಗಿಲ್ಲ. ದಾವಾ ಬಿ ಅನುಸೂಚಿ ಜಮೀನು ಸರ್ಕಾರ ಸ್ವತ್ತಾಗಿದ್ದು ದುರದ್ದೇಶದಿಂದ ವಿಬಾಗ ಪತ್ರದಲ್ಲಿ ಸೇರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾವು ಮಾರಾಟ ಮಾಡಿರುವ ಸ್ವತ್ತು ದಾವಾ ಬಿ ಅನುಸೂಚಿ ಸ್ವತ್ತಿನ ಪಕ್ಕದಲ್ಲಿದ್ದು ಆ ಎರಡು ಜಮೀನುಗಳ ನಡುವೆ ಬೇಲಿ ಇದೆ. ದಾವಾ ಎ ಅನುಸೂಚಿ ಮತ್ತು ದಾವಾ ಬಿ ಅನುಸೂಚಿ ಜಮೀನುಗಳಿಗೆ ಪ್ರತ್ಯೇಕ ಚಕ್ಕುಬಂದಿ ತೋರಿಸಿದ್ದೇನೆ ಎಂದರೆ ಸರಿ.

ದಾವಾ ಎ ಮತ್ತು ಬಿ ಅನುಸೂಚಿ ಜಮೀನುಗಳು ಒಟ್ಟಿಗೆ ಇದ್ದರೇ ಒಂದೇ ಚಕ್ಕುಬಂದಿ ನಮೂದಿಸಬೇಕಾಗಿತ್ತು ಎಂದರೆ ಸಾಕ್ಷಿಯು ಪ್ರತ್ಯೇಕ ಚಕ್ಕುಬಂದಿ ನೀಡಿರುವುದಾಗಿ ನುಡಿಯುತ್ತಾರೆ. ದಾವಾ ಎ ಅನುಸೂಚಿ ಜಮೀನಿನ ಯಾವ ದಿಕ್ಕಿಗೂ ಜೆ.ಸಿ.ಲಕ್ಷ್ಮಣ್ಣ, ವಸಂತಮ್ಮ, ತಿಮ್ಮಯ್ಯ ರವರ ಜಮೀನು ಇಲ್ಲ. ನಾನು ದಾವಾ ಎ ಅನುಸೂಚಿ ಜಮೀನಿಗೆ ಸುಳ್ಳು ಚಕ್ಕುಬಂದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಜಮೀನಿನ ಯಾವ ದಿಕ್ಕಿಗೂ ಸಹ ಜೆ.ಸಿ. ಲಕ್ಷ್ಮಣ್ಣ, ವಸಂತಮ್ಮ, ತಿಮ್ಮಯ್ಯರವರ ಜಮೀನು ಇಲ್ಲ. ದಾವಾ ಎ ಅನುಸೂಚಿ ಜಮೀನು ಮತ್ತು ದಾವಾ ಬಿ ಅನುಸೂಚಿ ಜಮೀನು ಒಂದಕ್ಕೊಂದು ದೂರವಿದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನಿನ ಚಕ್ಕುಬಂದಿಯೊಳಗೆ ದಾವಾ ಬಿ ಅನುಸೂಚಿ ಜಮೀನು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾವು ಮಾರಾಟ ಮಾಡಿರುವ ಜಾಗವನ್ನು ಅವರು ಮಾರಾಟ ಮಾಡಿದ್ದರೇ, ಖರೀದಿರರಿಗೆ ಬಿ ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ಕೊಡುತ್ತಾರೆ ಎಂದು ನಾವು ಭಾವಿಸಿದ್ದೇವೆ ಎಂದರೆ ಸರಿಯಲ್ಲ. ಈ ಕಾರಣ ಪ್ರತಿವಾದಿ ಜಮೀನನ್ನು ನಮಗೆ ಮಾರಾಟ ಮಾಡಬೇಕೆಂದು ನಾವು ಕೇಳಿದ್ದೇವೆ ಎಂದರೆ ಸರಿಯಲ್ಲ.

ನಾವು ಕೇಳಿದ ಬೆಲೆಗೆ ಪ್ರತಿವಾದಿ ಜಮೀನು ಮಾರಾಟ ಮಾಡಲು ಒಪ್ಪದ ಕಾರಣ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂಧ ಸುಳ್ಳು ಗೇಣಿ ದಾಖಲೆಗಳನ್ನು ಸೃಷ್ಟಿಸಿ, ದಾವಾ ಜಮೀನುಗಳಲ್ಲಿ ನಾವು ಸ್ವಾದೀನ ಇದ್ದೇವೆ ಎಂದು ಸುಳ್ಳು ಪ್ರತಿಪಾದಿಸುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ

ಎ ಅನುಸೂಚಿ ಸ್ವತ್ತಿನ ನಮ್ಮ ಸ್ವಾಧೀನಕ್ಕೆ ಪ್ರತಿವಾದಿ ಎಂದಿಗೂ ಸಹ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಎ ಅನುಸೂಚಿ ಸ್ವತ್ತಿನ ಕಂದಾಯ ದಾಖಲೆಗಳ ಮೇಲೆ ಪ್ರತಿಬಂಧಕಾಜ್ಞೆ ಸಿಗುತ್ತವೆ ಎಂದು ಆ ಜಮೀನನ್ನು ಸಹ ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ನನಾಗಾಗಲೀ ವಾದಿಯಾಗಲೀ ಎಂದಿಗೂ ಸಹ ದಾವಾ ಬಿ ಅನುಸೂಚಿ ಸ್ವತ್ತಿನ ಸ್ವಾದೀನದಲ್ಲಿ ಇಲ್ಲ ಹಾಗೂ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಸ್ವತ್ತಿನ ಸಂಬಂಧ ಕಂದಾಯ ಪಾವತಿ ಮಾಡಿಲ್ಲ. ಆ ಜಮೀನಿನನ್ನು ಕೃಷಿ ಮಾಡಿರುವ ಬಗ್ಗೆ ಹಾಗೂ ಅದರಿಂದ ಬರುವ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.